R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ– IV<br>**Part– IV** | ಬೆಂಗಳೂರು, ಮಂಗಳವಾರ, ೩೧, ಮಾರ್ಚ್, ೨೦೨೦ ( ಚೈತ್ರ ೧೧, ಶಕವರ್ಷ ೧೯೪೨)<br>**Bengaluru, TUESDAY, 31, MARCH, 2020 (Chaithra 11, ShakaVarsha 1942)** | ನಂ. ೧೨೧<br>**No. 121** |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 19 ಶಾಸನ 2020 ಬೆಂಗಳೂರು, ದಿನಾಂಕ: 31.03.2020**

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧ್ಯಾದೇಶ, 2020 ಇದಕ್ಕೆ 2020ರ ಮಾರ್ಚ್ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 03 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಾಗಿದೆ.

**2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 03**

**ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ಮಾರ್ಚ್ 31ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧ್ಯಾದೇಶ.

ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011ನ್ನು (2012ರ ಕರ್ನಾಟಕ ಅಧಿನಿಯಮ 08) ಮತ್ತಷ್ಟು ತಿದ್ದುಪಡಿ ಮಾಡಲು ಶ್ರೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.ಕ** (1) ಈ ಅಧ್ಯಾದೇಶವನ್ನು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು 2020ರ ಮಾರ್ಚ್ 30ನೇ ದಿನದಿಂದ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ ಸಂಖ್ಯೆ 8) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) (ಜಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

``(ಜಿ-ಎ) ``ಇತರ ರಸ್ತೆÀ" ಎಂದರೆ, ಕಾಲುದಾರಿ ಅಥವಾ ಬಂಡಿದಾರಿ ಮತ್ತು ಕಲ್ಲುಪುಡಿ ಮಾಡುವ ಘಟಕಗಳ(ಕ್ರಷರ್‌ಗಳ)ನ್ನು ತಲುಪುವ ರಸ್ತೆಗಳನ್ನು ಹೊರತುಪಡಿಸಿ ಎಲ್ಲಾ ಇತರ ರಸ್ತೆ;"

**3. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದ (2), (3), (4), (5), (6) ಮತ್ತು (7)ನೇ ಉಪಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು.

**4. 4ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಅರ್ಜಿದಾರನು ಲೈಸೆನ್ಸು ಮುಕ್ತಾಯವಾಗುವುದಕ್ಕೆ ಮೂರು ತಿಂಗಳಿಗೆ ಮೊದಲು ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ಆದರೆ ಲೈಸೆನ್ಸು ಮುಕ್ತಾಯವಾಗುವ ಒಂದು ತಿಂಗಳಿಗೆ ಮೊದಲು ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಜಂಟಿ ಪರಿಶೀಲನೆ ಮತ್ತು ಸುರಕ್ಷಿತ ವಲಯದ ಸೂಕ್ತತೆ ಹಾಗೂ ಇತರ ಮಾನದಂಡಗಳನ್ನು ತ್ವರಿತಗೊಳಿಸುವುದಕ್ಕಾಗಿ ನಿಯಮಿಸಬಹುದಾದ ಹೆಚ್ಚುವರಿ ಶುಲ್ಕವನ್ನು ಪಾವತಿಸುವುದಕ್ಕೆ ಒಳಪಟ್ಟು ಸಮುಚಿತ ಕಾರಣಗಳಿಗಾಗಿ ಅದನ್ನು ಒಪ್ಪಬಹುದು."

**5. 4ಎ ಮತ್ತು 4ಬಿ ಹೊಸ ಪ್ರಕರಣಗಳ ಸೇರ್ಪಡೆ.-** ಮೂಲ ಅಧಿನಿಯಮದ 4ನೇ ಪ್ರಕರಣದ ತರುವಾಯ ಈ ಮುಂದಿನ 4ಎ ಮತ್ತು 4ಬಿ ಹೊಸ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:-

**"4ಎ. ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸ್ ವರ್ಗಾವಣೆ:-** (1) ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸಿನ ವರ್ಗಾವಣೆಯ ಸಂದರ್ಭದಲ್ಲಿ, ಲೈಸೆನ್ಸುದಾರನು ಲೈಸೆನ್ಸಿನ ವರ್ಗಾವಣೆಗಾಗಿ ಲೈಸೆನ್ಸಿಂಗ್ ಪ್ರಾಧಿಕಾರಕ್ಕೆ ಈ ಮುಂದಿನವುಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು,-

(ಎ) ಪ್ರಕ್ರಿಯಾ ಶುಲ್ಕವಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳ ಮರುಪಾವತಿಸದಿರುವ ಅರ್ಜಿಶುಲ್ಕ;

(ಬಿ) ವರ್ಗಾವಣೆದಾರನು ತಾನು ಲೈಸೆನ್ಸಿನ ಎಲ್ಲಾ ನಿಬಂಧನೆಗಳು, ಷರತ್ತುಗಳು ಮತ್ತು ಹೊಣೆಗಾರಿಕೆಗಳು ಅಥವಾ ಬಾಧ್ಯತೆಗಳಿಗೆ ಬದ್ಧನಾಗಿರುವನೆಂದು ಹೇಳಿಕೆಯುಳ್ಳ ಒಂದು ಶಪಥಪತ್ರ (Affidavit);

(ಸಿ) ಉದ್ದೇಶಿತ ವರ್ಗಾವಣೆದಾರನು ಇಂದಿನವರೆಗೆ ದಾಖಲಿಸಿದ ಆದಾಯ ತೆರಿಗೆ ವಿವರ ಪಟ್ಟಿಕೆಗಳು, ಆತನಿಗೆ ನಿರ್ಧರಿತವಾದ ಆದಾಯ ತೆರಿಗೆಯನ್ನು ಪಾವತಿ ಮಾಡಿದ ಹಾಗೂ ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ಒದಗಿಸಿದ ಸ್ವಯಂ ನಿರ್ಧರಣೆಯ ಆಧಾರದ ಮೇಲೆ ಆದಾಯ ತೆರಿಗೆಯನ್ನು ಪಾವತಿಸಿದ ಹೇಳಿಕೆಯುಳ್ಳ ಒಂದು ಶಪಥಪತ್ರ (Affidavit);

(ಡಿ) ವರ್ಗಾವಣೆದಾರನು ಅಂಥ ಕಲ್ಲುಪುಡಿ ಮಾಡುವ ಘಟಕವುಳ್ಳ ಸ್ಥಳವಿರುವ ಭೂಮಿಯ ಮಾಲೀಕನ ಒಪ್ಪಿಗೆಯನ್ನು ಪಡೆದಿರುವುದಕ್ಕಾಗಿ ದಸ್ತಾವೇಜುಗಳ ಪುರಾವೆಯನ್ನು ಒದಗಿಸತಕ್ಕದ್ದು. ಭೂಮಿಯನ್ನು ಗುತ್ತಿಗೆ ಪಡೆದ ಸಂದರ್ಭದಲ್ಲಿ ಮಾಲೀಕನು ಅಂಥ ಭೂಮಿಗಾಗಿ ವಿಸ್ತರಿಸಿದ ಗುತ್ತಿಗೆ;

(ಇ) ವರ್ಗಾವಣೆಗಾಗಿ ಅರ್ಜಿಸಲ್ಲಿಸಿದ ದಿನಾಂಕದವರೆಗೂ ರಾಜ್ಯ ಸರ್ಕಾರಕ್ಕೆ ಸಂದಾಯವಾಗಬೇಕಾದ ಎಲ್ಲಾ ಬಾಕಿಗಳನ್ನೂ ವರ್ಗಾವಣೆದಾರ ಮತ್ತು ವರ್ಗಾಯಿಸಬೇಕಾದವನು ಪಾವತಿಸಿದ ಹೇಳಿಕೆಯುಳ್ಳ ಒಂದು ಶಪಥಪತ್ರ (Affidavit):

ಪರಂತು, ಲೈಸೆನ್ಸುದಾರನ ಸ್ವಂತ ವೆಚ್ಚಗಳಲ್ಲಿ ಲೈಸೆನ್ಸುದಾರ ಮತ್ತು ಉದ್ದೇಶಿತ ವರ್ಗಾವಣೆದಾರನೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕ/ಹಿರಿಯ ಭೂವಿಜ್ಞಾನಿಯು ಸರ್ವೇಕ್ಷಣಾ ಗಡಿಗುರುತಿಸುವಿಕೆಯನ್ನು ಮಾಡಿದ ಹೊರತು ಅಂಥ ವರ್ಗಾವಣೆಯನ್ನು ಅನುಮತಿಸತಕ್ಕದ್ದಲ್ಲ.

(2) ಅಂಥ ಲೈಸೆನ್ಸಿನ ವರ್ಗಾವಣೆಗಾಗಿ ಲೈಸೆನ್ಸಿಂಗ್ ಪ್ರಾಧಿಕಾರವು, ಸಮ್ಮತಿ ನೀಡಿದರೆ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಕಲ್ಲುಪುಡಿಮಾಡುವ ಘಟಕದ (ಕ್ರಷರ್) ಡೀಡ್-ನ ವರ್ಗಾವಣೆಯನ್ನು, ಪತ್ರವ್ಯವಹಾರದ

ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ ಅಥವಾ ಈ ಕುರಿತು ಲೈಸೆನ್ಸಿಂಗ್ ಪ್ರಾಧಿಕಾರವು ಅನುಮತಿಸಬಹುದಾದ ಆರು ತಿಂಗಳುಗಳನ್ನು ಮೀರದ ಅಂಥ ಮುಂದುವರಿಕೆ ಅವಧಿಯ ಒಳಗಾಗಿ ಜಾರಿ ಮಾಡತಕ್ಕದ್ದು.

**4ಬಿ. ಲೈಸೆನ್ಸುದಾರ ಮೃತನಾದಾಗ ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸಿನ ಸ್ಥಿತಿಗತಿ.-** ಕಲ್ಲು ಪುಡಿಮಾಡುವ ಘಟಕದ ಲೈಸೆನ್ಸು ಚಲಾವಣೆಯಲ್ಲಿರುವಾಗ ಲೈಸೆನ್ಸುದಾರನು ಮೃತನಾದರೆ ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಆತನ ಕಾನೂನು ಸಮ್ಮತ ಪ್ರತಿನಿಧಿಯು ಲೈಸೆನ್ಸಿನ ವರ್ಗಾವಣೆಗೆ ಅರ್ಹನಾಗತಕ್ಕದ್ದು."

**6. 5ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 5ನೇ ಪ್ರಕರಣವನ್ನು (1)ನೇ ಉಪಪ್ರಕರಣ ಎಂದು ಮರುಸಂಖ್ಯೆ ನೀಡತಕ್ಕದ್ದು, ಮತ್ತು,-

(i) ಹಾಗೆ ಮರುಸಂಖ್ಯೆ ನೀಡಲಾದ (1)ನೇ ಉಪಪ್ರಕರಣದಲ್ಲಿ "ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು" ಮತ್ತು "ಐದು ವರ್ಷಗಳ ಮತ್ತಷ್ಟು ಅವಧಿಗಾಗಿ" ಎಂಬ ಪದಗಳಿಗೆ "ಇಪ್ಪತ್ತು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು" ಮತ್ತು "ಹತ್ತು ವರ್ಷಗಳ ಮತ್ತಷ್ಟು ಅವಧಿಗಾಗಿ" ಎಂಬ ಪದಗಳನ್ನು ಅನುಕ್ರವಾಗಿ ಪ್ರತಿಯೋಜಿಸತಕ್ಕದ್ದು;

(ii) (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ನಿಯಮಿಸಬಹುದಾದ ಅಂಥ ವಾರ್ಷಿಕ ನಿಯಂತ್ರಣಾ ಶುಲ್ಕ ಪಾವತಿಗೆ ಒಳಪಟ್ಟು, ಕರ್ನಾಟಕ ಕಲ್ಲುಪುಡಿಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧ್ಯಾದೇಶ, 2020ಕ್ಕಿಂತ ಮೊದಲು ಮಂಜೂರಾದ ಅಸ್ತಿತ್ವದಲ್ಲಿರುವ ಎಲ್ಲ ಕಲ್ಲುಪುಡಿಮಾಡುವ ಘಟಕಗಳ (ಕ್ರಷರ್ಗಳ) ಲೈಸೆನ್ಸುಗಳು ಮಂಜೂರಾದ ಮೂಲ ದಿನಾಂಕದಿಂದ ಇಪ್ಪತ್ತು ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವಿಸ್ತರಿಸತಕ್ಕದ್ದು.

(3) ಈ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿನ ವಿಸ್ತರಣೆಯ ಪ್ರಯೋಜನವು,-

(i) ಲೈಸೆನ್ಸಿಂಗ್ ಪ್ರಾಧಿಕಾರದ ಮುಂದೆ ಪರಿಗಣನೆಗಾಗಿ ಬಾಕಿಯಿರುವ ಅಂಥ ಲೈಸನ್ಸು ಮುಕ್ತಾಯಗೊಳ್ಳುವ ಮೊದಲು ದಾಖಲಿಸಿರುವ ಕಲ್ಲುಪುಡಿಮಾಡುವ ಘಟಕದ ಲೈಸೆನ್ಸು ನವೀಕರಣ ಅರ್ಜಿಯ ಪ್ರಕರಣಗಳಿಗೆ; ಹಾಗೂ

(ii) ಅಂಥ ಲೈಸೆನ್ಸು ಮುಕ್ತಾಯಗೊಳ್ಳುವ ಮೂರು ತಿಂಗಳುಗಳ ಮೊದಲು ಅಂಥ ಅರ್ಜಿಗಳನ್ನು ಸಲ್ಲಿಸಿಲ್ಲದ ಏಕಮಾತ್ರ ಆಧಾರದ ಮೇಲೆ ನವೀಕರಣ ಅರ್ಜಿಗಳನ್ನು ಲೈಸೆನ್ಸಿಂಗ್ ಪ್ರಾಧಿಕಾರವು ತಿರಸ್ಕರಿಸಿದ್ದು, ಆದರೆ (1)ನೇ ಉಪಪ್ರಕರಣದ ಅಡಿಯಲ್ಲಿ ನಿಗದಿಪಡಿಸಿದಂತೆ (ii)ನೇ ಖಂಡದ ಅಡಿಯಲ್ಲಿ ನವೀಕರಣಕ್ಕಾಗಿ ಎರಡು ಲಕ್ಷ ರೂಪಾಯಿಗಳ ದಂಡ ಪಾವತಿಗೆ ಒಳಪಟ್ಟು ಲೈಸೆನ್ಸು ಮುಕ್ತಾಯಗೊಳ್ಳುವ ಅವಧಿಯ ಒಳಗೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ ಪ್ರಕರಣಗಳಿಗೂ,

- ಸಹ ಅನ್ವಯವಾಗತಕ್ಕದ್ದು.

(4) ಈ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿದ ಕಲ್ಲುಪುಡಿಮಾಡುವ ಘಟಕದ (ಕ್ರಷರ್) ಲೈಸೆನ್ಸಿನ ಅವಧಿ ಮುಕ್ತಾಯಗೊಳ್ಳುವ ಮೇರೆಗೆ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದಾಗ, ಲೈಸೆನ್ಸಿಂಗ್ ಪ್ರಾಧಿಕಾರವು ಹತ್ತು ವರ್ಷಗಳ ಮತ್ತೊಂದು ಅವಧಿಯವರೆಗೆ ಲೈಸೆನ್ಸನ್ನು ವಿಸ್ತರಿಸಬಹುದು."

**7. 6ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ಅಥವಾ ಇತರ ರಸ್ತೆಗಳ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು ಹಾಗೂ ಕೊನೆಯಲ್ಲಿ "ಮತ್ತು ಇತರ ರಸ್ತೆಗಳ ಗಡಿಯಿಂದ ಐವತ್ತು ಮೀಟರುಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (3)ನೇ ಉಪಪ್ರಕರಣದಲ್ಲಿ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"ವಿವರಣೆ:** ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಜನವಸತಿ, ಶಾಲೆ, ದೇವಾಲಯಗಳು ಅಥವಾ ರಸ್ತೆಯು ಸುರಕ್ಷಿತ ವಲಯದ ಘೋಷಣೆಯ ಆನಂತರ ಬಂದರೆ, ಅಂಥ ಘೋಷಣೆಯ ಕಾರ್ಯಾಚರಣೆ ಅಥವಾ ಮುಂದುವರಿಕೆಗೆ ಪರಿಣಮಿಸತಕ್ಕದ್ದಲ್ಲ ಮತ್ತು 5ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸಿನ ಯಾವುದೇ ಮಂಜೂರಾತಿ ಅಥವಾ ವಿಸ್ತರಣೆಗೆ ಪರಿಣಾಮ ಬೀರತಕ್ಕದ್ದಲ್ಲ."

**8. 6ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 6ಎ ಪ್ರಕರಣದಲ್ಲಿನ (2)ನೇ ಉಪಪ್ರಕರಣದಲ್ಲಿ (2)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಎ) ಪ್ರತಿಯೊಬ್ಬ ಲೈಸೆನ್ಸುದಾರನು, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) (ತಿದ್ದುಪಡಿ) ಅಧ್ಯಾದೇಶ, 2020 ಜಾರಿಗೆ ಬಂದ ದಿನಾಂಕದಿಂದ ನಿಯಮಿಸಬಹುದಾದ ಅಂಥ ವಾರ್ಷಿಕ ನಿಯಂತ್ರಣಾ ಶುಲ್ಕವನ್ನು ಪಾವತಿಸತಕ್ಕದ್ದು."

**9. 16ನೇ ಪ್ರಕರಣದ ತಿದ್ದುಪಡಿ.-** 16ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"16. ದಂಡಗಳು.-** (1) (3)ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು ಅಪರಾಧ ನಿರ್ಣೀತನಾದ ಮೇಲೆ ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಎರಡರಿಂದಲೂ ಹಾಗೂ ಉಲ್ಲಂಘನೆಯನ್ನು ಮುಂದುವರೆಸಿದ ಸಂದರ್ಭದಲ್ಲಿ, ಅಂಥ ಮೊದಲ ಉಲ್ಲಂಘನೆಯ ತರುವಾಯ ಮುಂದುವರಿದ ಅಂಥ ಉಲ್ಲಂಘನೆಗೆ ಪ್ರತಿಯೊಂದು ದಿವಸಕ್ಕಾಗಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(1ಎ) ಲೈಸೆನ್ಸುದಾರನು ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಅಪರಾಧ ನಿರ್ಣೀತನಾದ ಮೇಲೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳ ಜುಲ್ಮಾನೆಯೊಂದಿಗೆ ಅಥವಾ ಎರಡರಿಂದಲೂ ಹಾಗೂ ಉಲ್ಲಂಘನೆಯನ್ನು ಮುಂದುವರೆಸಿದ ಸಂದರ್ಭದಲ್ಲಿ, ಅಂಥ ಮೊದಲ ಉಲ್ಲಂಘನೆಯ ತರುವಾಯ ಮುಂದುವರಿದ ಅಂಥ ಉಲ್ಲಂಘನೆಗೆ ಪ್ರತಿಯೊಂದು ದಿವಸಕ್ಕಾಗಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**10. 17ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಲೈಸೆನ್ಸಿಂಗ್ ಪ್ರಾಧಿಕಾರವು" ಎಂಬ ಪದಗಳಿಗೆ "ರಾಜ್ಯ ಸರ್ಕಾರವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. 17-ಎ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 17ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"17ಎ. ಅಪರಾಧಗಳ ರಾಜಿ.-** (1) 16ನೇ ಪ್ರಕರಣದ (1ಎ) ಉಪಪ್ರಕರಣದ ಅಡಿಯಲ್ಲಿನ ಯಾವುದೇ ದಂಡನೀಯ ಅಪರಾಧಕ್ಕೆ ಅಭಿಯೋಜನೆಯನ್ನು ನಡೆಸುವ ಮೊದಲು ಅಥವಾ ನಡೆಸಿದ ತರುವಾಯ, 16ನೇ ಪ್ರಕರಣದಲ್ಲಿ

ನಿರ್ದಿಷ್ಟಪಡಿಸಿದ ಮೊತ್ತವನ್ನು ಸರ್ಕಾರಕ್ಕೆ ಜಮೆಗೊಳಿಸಿ ಪಾವತಿಸಿದ ಮೇಲೆ ಸಂಬಂಧಿತ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸೇರಿದ ಉಪನಿರ್ದೇಶಕ ಅಥವಾ ಹಿರಿಯ ಭೂ ವಿಜ್ಞಾನಿ ಅಥವಾ ಸರ್ಕಾರವು ಗೊತ್ತುಪಡಿಸಿದ ಅಧಿಕಾರಿಯ ಮೂಲಕ ರಾಜಿ ಮಾಡಿಕೊಳ್ಳಬಹುದು.

(2) ಈ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಪರಾಧವನ್ನು ರಾಜಿ ಮಾಡಿಕೊಂಡರೆ ಹಾಗೆ ರಾಜಿ ಮಾಡಿಕೊಂಡ ಅಪರಾಧದ ಸಂದರ್ಭದಲ್ಲಿ ಅಪರಾಧಿಯ ವಿರುದ್ಧ ಯಾವುದೇ ವ್ಯವಹರಣೆಗಳನ್ನು ಅಥವಾ ಸಂದರ್ಭಾನುಸಾರವಾಗಿ ಮುಂದುವರೆದ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ ಹಾಗೂ ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ ಕೂಡಲೇ ಬಿಡುಗಡೆಗೊಳಿಸತಕ್ಕದ್ದು.

**ವಜೂಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**

**NOTIFICATION**

**No. DPAL 19 SHASANA 2020, Bengaluru, dated: 31.03.2020**

THE KARNATAKA REGULATION OF STONE CRUSHERS (AMENDMENT) ORDINANCE, 2020 ಇದಕ್ಕೆ 2020ರ ಮಾರ್ಚ್ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 03 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಾಗಿದೆ.

**KARNATAKA ORDINANCE NO. 03 OF 2020**

## THE KARNATAKA REGULATION OF STONE CRUSHERS (AMENDMENT) ORDINANCE, 2020

(Promulgated by the Governor of Karnataka in the Seventy first year of the Republic of India and First published in the Karnataka Gazette Extra-ordinary on the 31st day of March, 2020)

An Ordinance to amend the Karnataka Regulation of Stone Crushers Act, 2011.

Whereas both the Houses of the state legislature are not in session and His Excellency the Governor of Karnataka is satisfied that the circumstances exist which render it necessary for him to take immediate action, further to amend the Karnataka Regulation of Stone Crushers Act, 2011. (Karnataka Act 08 of 2012) for the purposes hereinafter appearing;

Now, therefore in exercise of the powers conferred by clause (1) of Article 213 of the Constitution of India, His Excellency the Governor of Karnataka is pleased to promulgate the following Ordinance, namely:-

**1. Short title and commencement.-** (1) This Ordinance may be called the Karnataka Regulation of Stone Crushers (Amendment) Ordinance, 2020.

(2) It shall come into force with effect from 30th day of March 2020.

**2. Amendment of section 2.-** In the Karnataka Regulation of Stone Crushers Act, 2011 (Karnataka Act 08 of 2012) (hereinafter referred to as the principal Act), in section 2, in sub-section (1),-

(i) after clause (g), the following shall be inserted, namely:-

"(g-a) other road" means all other road excluding foot or cart road, and road approaching stone crushers;"

**3. Amendment of section 3.-** In section 3 of the principal Act, sub-sections (2), (3), (4), (5), (6) and (7) shall be omitted.

**4. Amendment of section 4.-** In section 4 of the principal Act, after sub-section (1) the following proviso shall be inserted, namely:-

"Provided that, where an applicant has not submitted application three months before the expiry of the licence but makes an application one month before expiry of the licence, it may be accepted for the valid reasons, subject to payment of an additional fee as may be prescribed for expediting the joint inspection and suitability of safer zone and other parameters."

**5. Insertion of new section 4A and 4B.-** After section 4 of the principal Act, the following new sections 4A and 4B shall be inserted, namely:-

**"4A. Transfer of Crusher license:-** (1) In case of transfer of crusher license, the licensee shall apply to the Licensing Authority for transfer of license along with,-

(a) non-refundable application fee of rupees twenty-five thousand as a processing fee;

(b) an affidavit by the transferee stating that he shall abide by all the terms, conditions and liabilities or obligations of the license;

(c) an affidavit stating that intending transferee has filed an up-to-date income tax returns, paid the income tax assessed on him and paid the income tax on the basis of self-assessment as provided under the Income-tax Act, 1961 (Central Act No. 43 of 1961);

(d) The transferee shall furnish the proof of documents for having consent of the owner of land on which such crusher is located. Lease on such land extended by the owner in case of leased land.

(e)an affidavit stating that intending Transferee and transferor have paid all the dues payable to the state Government up to the date of make application for transfer.

Provided that, such transfer shall not be allowed unless a survey demarcation is made by the Deputy Director or Senior Geologist of the concerned District along with licensee and intending transferee at licensee's own expenses.

(2) Where the Licensing authority has given consent for transfer of such license, a transfer of crusher license deed in such form, as may be prescribed, shall be executed within six months from the date of communication or within such further period not exceeding six months as the Licensing Authority may allow in this behalf.

**4B. Status of crusher license on death of the licensee**,- Where a licensee expires during the currency of crusher license, legal representative shall be eligible for transfer subject to such conditions as may be prescribed."

**6. Substitution of section 5.-** section 5 of the principal Act, shall be renumbered as sub-section (1) thereof and,-

(i) in sub-section (1) as to re-numbered, for the words "valid for five years" and for the words "for further period of five years" the words "valid for twenty years" and the words "further period of ten years" shall be substituted.

(ii) after sub-section (1) the following shall be inserted, namely:-

"(2) Subject to payment of such annual regulation fee as may be prescribed, all existing crusher licenses granted before the commencement of Karnataka Stone Crusher Regulation (Amendment) Ordinance, 2020, shall be deemed to have been granted for a period of twenty Years from the date of original grant and shall be extended accordingly.

(3) The benefit of extension under sub-section (2) of this section shall also apply,-

(i) for cases where crusher license renewal application was filed before the expiry of such license which is pending consideration before the licensing Authority; and

(ii) for the cases where the licensing Authority has rejected renewal applications solely on the ground of non-filling of such applications three months prior to expiry of such license but has applied for renewal before the expiry of licence as stipulated under sub-section (1), the renewal under clause (ii) shall be subject to payment of the penalty of rupees two lakh.

(4) Upon expiry of the period of crusher license specified in sub-section (1) and (2) of this section, the Licensing Authority may renew the licence on an application for renewal for further period for ten years".

**7. Amendment of section 6.-** In section 6 of the principal Act,-

(i) in sub-section (1), in clause (b), for the word "or" the words "and fifty meter from the limits of " shall be substituted.

(ii) in sub-section (3), after the proviso the following explanation shall be inserted, namely:-

**"Explanation:** For the purpose of this Act, any habitation, school, temples or road coming up subsequent to declaration of safer zone shall not affect the operation or continuance of such declaration and shall not affect any extension of licence under section 5."

**8. Amendment of section 6A.-** In section 6A of the principal Act, in sub-section (2), after clause (2), the following shall be inserted, namely:-

"(2A) Every licencee shall pay such an annual regulation fee as may be prescribed, with effect from the date of commencement of the Karnataka Regulation of Stone Crushers (Amendment) Ordinance, 2020."

**9.Amendment of section 16.-** In section 16 of the principal Act, for sub-section (1) the following shall be substituted, namely:-

"**16. Penalties.-** (1) whoever contravenes the provisions of section 3 shall on conviction be punished with imprisonment for a term which may extend to two years or with fine which may extend upto of two lakh rupee or with both and in case continuing contravention, with and additional fine which may extend to five thousand rupees for every day during which such contravention continues after first such contravention.

(1A) If Licensee contravenes the conditions of the License shall on conviction be publishable with imprisonment for a term which may extend to one year, or with fine of twenty-five thousand rupees or with both and in case of continuing contravention, with an additional fine which may extend to five hundred rupees for every day during which such contravention continues after first such contravention".

**10. Amendment of section 17.-** In section 17 of the principal Act, in sub-section (1), for the words "Licensing Authority", the words "State Government" shall be substituted.

**11. Insertion of new section 17-A.-** After section 17 of the principal Act, the following shall be inserted, namely:-

"**17-A. Compounding of offences.-** (1) Any offence punishable under sub-section (1A) of section 16 may, either before or after the institution of the prosecution, be compounded by the Deputy Director or Senior geologist of the concerned district belonging to Department of Mines and Geology or an officer designated by government on payment of amount not exceeding the penalty specified in section 16, for credit to the Government.

(2) Where an offence is compounded under sub-section (1) of this section, no proceedings or further proceeding, as the case may be, shall be taken against the offender in respect of the offence so compounded, and the offender, if in custody, shall be released forthwith."

**VAJUBHAI VALA**
**GOVERNOR OF KARNATAKA**

By order and in the name of the
Governor of Karnataka,

**(K. DWARAKANATH BABU)**
Secretary to Government
Department of Parliamentary Affairs and
Legislation.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE
Date: 2020.04.02 12:06:25 +05'30'